I/174932/2021

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಉಪ ವಿಭಾಗಾಧಿಕಾರಿಗಳ(KLLAD) ವೈಯಕ್ತಿಕ ಠೇವಣಿ ಖಾತೆಗಳನ್ನು 2021-22 ನೇ ಸಾಲಿನ ಮುಂದುವರೆಸುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಆಇ 41 ಟಿಎಆರ್ 2019 ದಿನಾಂಕ:19.12.2019.

2) ಸರ್ಕಾರದ ಆದೇಶ ಸಂ:ಆಇ 17 ಟಿಎಆರ್ 2021, ದಿ:11.5.2021.

3) ಸರ್ಕಾರದ ಆದೇಶ ಸಂ:ಆಇ 24 ಟಿಎಆರ್ 2021, ದಿ:17.07.2021.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಹೆಸರಿನಲ್ಲಿರುವ KLLAD ಯೋಜನೆಗೆ ಸಂಬಂಧ ಪಿ.ಡಿ. ಖಾತೆಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ 286 ಎ ಪ್ರಕಾರ ಪ್ರತಿ ಆರ್ಥಿಕ ಸಾಲಿನ ಅಂತ್ಯದಲ್ಲಿ ಮುಕ್ತಾಯಗೊಳಿಸಿ ಮುಂದಿನ ಆರ್ಥಿಕ ಸಾಲಿನಲ್ಲಿ ಮುಂದುವರೆಸಲು ಇಚ್ಛಿಸಿದಲ್ಲಿ ಇಲಾಖೆಯ ನಗದು ಪುಸ್ತಕದ ಶಿಲ್ಕಿಗೂ ಹಾಗೂ ಖಜಾನೆ ಖಾತೆಯ ಶಿಲ್ಕಿಗೂ ಲೆಕ್ಕ ಹೊಂದಾಣಿಕೆ ಮಾಡಿ ದೃಢೀಕರಿಸಿದ ನಂತರ ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ಸಂಬಂಧಪಟ್ಟ ಯೋಜನಾ ಇಲಾಖೆಯ ಮುಖಾಂತರ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ರಾಜ್ಯ ಎಲ್ಲಾ ಉಪವಿಭಾಗಾಧಿಕಾರಿಗಳ ಹೆಸರಿನಲ್ಲಿರುವ KLLAD ಯೋಜನೆಯ ವೈಯಕ್ತಿಕ ಠೇವಣಿ ಖಾತೆಯ ನಗದುಪುಸ್ತಕ ಶಿಲ್ಕಿಗೂ ಮತ್ತು ಖಜಾನೆ ಅಖೈರು ಶಿಲ್ಕಿಗೂ ಲೆಕ್ಕಹೊಂದಾಣಿಕೆ ಮಾಡಿ ದೃಢೀಕರಣ ಮುಂತಾದ ಮಾಹಿತಿಗಳನ್ನು ಒದಗಿಸಲು ಕಾಲಾವಕಾಶ ಬೇಕಾಗಿರುವುದರಿಂದ ಎಲ್ಲಾ ಉಪವಿಭಾಗಾಧಿಕಾರಿಗಳ ಪಿಡಿ ಖಾತೆಗಳನ್ನು ದಿನಾಂಕ:01.04.2021 ರಿಂದ 30.06.2021 ರವರೆಗೆ ಮುಂದುವರೆಸಲು ಅನುಮತಿ ನೀಡಲಾಗಿದೆ.

ಆದಾಗ್ಯೂ ಕೆಲವು ಉಪವಿಭಾಗಾಧಿಕಾರಿಗಳನ್ನು ಹೊರತುಪಡಿಸಿ ಇತರ ಉಪವಿಭಾಗಾಧಿಕಾರಿಗಳು ತಮ್ಮ KLLAD ಯೋಜನೆಯ ವೈಯಕ್ತಿಕ ಠೇವಣಿ ಖಾತೆಗಳನ್ನು ನಗದುಪುಸ್ತಕ ಶಿಲ್ಕಿನೊಂದಿಗೆ ಮತ್ತು ಖಜಾನೆ ಅಖೈರು ಶಿಲ್ಕಿನೊಂದಿಗೆ ಲೆಕ್ಕಹೊಂದಾಣಿಕೆ ಮಾಡಿದ ಬಗ್ಗೆ ಹಾಗೂ KLLAD ಯೋಜನೆಗಳಿಗೆ ಸಂಬಂಧ ವಿವರಗಳನ್ನು ಒದಗಿಸಿರುವುದಿಲ್ಲ. ಈ ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಲು ಕಾಲಾವಕಾಶ ಅಗತ್ಯವಿರುವುದನ್ನು ಮನಗಂಡು ಎಲ್ಲಾ ಉಪವಿಭಾಗಾಧಿಕಾರಿಗಳ ಪಿಡಿ ಖಾತೆಗಳನ್ನು ದಿನಾಂಕ:31.08.2021 ರವರೆಗೆ ಮುಂದುವರೆಸಲು ಪುನ: ಅನುಮತಿ ನೀಡಲಾಯಿತು.

ಈ ಸಂಬಂಧ KLLAD ಯೋಜನೆಯ ಕಾಮಗಾರಿಗಳು ಕುಂಠಿತಗೊಂಡು ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಯೋಜನೆಗಳು ಅನುಷ್ಠಾನಗೊಂಡು ಪೂರ್ಣಗೊಳಿಸಬೇಕಾಗಿರುವುದನ್ನು ಮನಗಂಡು ಎಲ್ಲಾ ಉಪವಿಭಾಗಾಧಿಕಾರಿಗಳ ಪಿಡಿ ಖಾತೆಗಳನ್ನು 31.12.2021 ರವರೆಗೆ ಮುಂದುವರೆಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

I/174932/2021

<u>ಸರ್ಕಾರದ ಆದೇಶ ಸಂಖ್ಯೆ ಆಇ 24 ಟಿಎಆರ್ 2021, ಬೆಂಗಳೂರು,</u>

<u>ದಿನಾಂಕ: 07-10-2021</u>

ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಹೆಸರಿನಲ್ಲಿರುವ KLLAD ಯೋಜನೆಯ ವೈಯಕ್ತಿಕ ಠೇವಣಿ ಖಾತೆಗಳನ್ನು ದಿನಾಂಕ:01.09.2021 ರಿಂದ 31.12.2021 ರವರೆಗೆ ಮುಂದುವರೆಸಲು ಅನುಮತಿ ನೀಡಲಾಗಿದೆ.

ಈ ಪಿ.ಡಿ.ಖಾತೆಯಲ್ಲಿ KLLAD ಯೋಜನೆಗಳಿಗೆ ಬಿಡುಗಡೆಯಾದ ಅನುದಾನಗಳನ್ನು ಮಾತ್ರ ಜಮೆ ಮಾಡಿ ನಿರ್ವಹಿಸಲು ತಿಳಿಸಿದೆ.

ದಿನಾಂಕ:01.01.2022 ರಿಂದ ವೈಯಕ್ತಿಕ ಠೇವಣಿ ಖಾತೆಗಳನ್ನು ಮುಂದುವರೆಸಲು ಈ ಕೆಳಗಿನ ಮಾಹಿತಿಗಳನ್ನು ಕಡ್ಡಾಯವಾಗಿ ಉಪವಿಭಾಗಾಧಿಕಾರಿಗಳು ಒದಗಿಸಬೇಕಾಗುತ್ತದೆ.

1. ದಿನಾಂಕ:31.12.2021 ರ ಅಂತ್ಯಕ್ಕೆ KLLAD ಗೆ ಸಂಬಂಧ ಪಿಡಿ ಖಾತೆಯಲ್ಲಿ ನಗದುಪುಸ್ತಕದಲ್ಲಿರುವ ಯೋಜನಾವಾರು ಶಿಲ್ಕುಗಳ ವಿವರಗಳನ್ನು ಒದಗಿಸುವುದು.
2. ದಿನಾಂಕ:31.12.2021 ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿನ ಪಟ್ಟಿ ಒದಗಿಸುವುದು.
3. ದಿನಾಂಕ:31.12.2021 ರ ಅಂತ್ಯಕ್ಕೆ ಖಜಾನೆ ಅಖೈರು ಶಿಲ್ಕಿಗೂ ನಗದುಪುಸ್ತಕ ಶಿಲ್ಕಿಗೂ ಲೆಕ್ಕಹೊಂದಾಣಿಕೆ ಮಾಡಿ ವ್ಯತ್ಯಾಸವಿದ್ದಲ್ಲಿ ಸರಿಪಡಿಸಿ ಪ್ರಸ್ತಾವನೆ ಸಲ್ಲಿಸುವುದು.

ಆಗಿಂದಾಗ್ಗೆ ಇಲಾಖೆಯ ನಗದು ಶಿಲ್ಕಿಗೂ ಮತ್ತು ಖಜಾನೆಯ ಅಖೈರು ಶಿಲ್ಕಿಗೂ ಲೆಕ್ಕಸಮನ್ವಯಗೊಳಿಸುವ ಷರತ್ತಿಗೆ ಒಳಪಟ್ಟು ಮಂಜೂರಾತಿ ನೀಡಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**Signed by Shobha Ha**
**Date: 07-10-2021 16:30:45**
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ,
(ಆನಿ ಮತ್ತು ಬಿಸಿಸಿ)

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಎ) ಕರ್ನಾಟಕ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು, (ಠೇವಣಿ ಶಾಖೆ) ಕರ್ನಾಟಕ, ಬೆಂಗಳೂರು-1.

I/174932/2021

3. ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಖಜಾನೆ ಆಯುಕ್ತರು, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರಿನ್ ಕಟ್ಟಡ, ಔಷದ ನಿಯಂತ್ರಣ ಅವರಣ. ಬೆಂಗಳೂರು-560 001.
5. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು/ತಾಲ್ಲೂಕು ಉಪ ಖಜಾನೆಗಳು.
7. ಹೆಚ್ಚವರಿ ಪ್ರತಿಗಳು / ಶಾಖಾರಕ್ಷಾ ಕಡತ.